ಶ್ರೀ ಕೆ. ರತ್ನಕುಮಾರ ಶೆಟ್ಟಿ.—ಮಾನ್ಯ ಅಧ್ಯಕ್ಷರೇ, ಇದು ಅರ್ಧಗಂಟೆ ಕಾಲದ ಚರ್ಚೆಗೆ ತೆಗೆದುಕೊಳ್ಳುತಕ್ಕ ವಿಚಾರ, ಅದಕ್ಕೆ ಅವಕಾಶ ಕೊಡಬೇಕು.

ಅಧ್ಯಕ್ಷರು.—ಮುಂಚಿತವಾಗಿಯೇ ಭರವಸೆ ಕೊಡುವುದಕ್ಕೆ ಆಗುವುದಿಲ್ಲ.

ಶ್ರೀ ಬಿ. ಭಾನ್ಕರ ಶೆಟ್ಟಿ.—18 ಸಾವಿರ ರೂಪಾಯಿ ದುರುಪಯೋಗವಾಗಿದೆ ಎಂದು ಕೊಟ್ಟಿದ್ದಾರೆ. ಆಪಾದಿತರನ್ನು ಏನಾದರೂ ಆಪಾದನೆಗೆ ಒಳಪಡಿಸಲಾಗಿದೆಯೇ? ಅವರನ್ನು ಬಂಧಿಸಲಾಗಿದೆಯೇ, ಎಂದು ಕೇಳಿರುವುದಕ್ಕೆ ಇಲ್ಲ ಎಂದು ಹೇಳಿದ್ದಾರೆ. ಇವರ ಮೇಲೆ ಇಷ್ಟು ಕರುಣೆ ಏಕೆ? ಈ ವಿಷಯದಲ್ಲಿ ಏನು ಕ್ರಮ ಕೈಕೊಂಡಿದ್ದಾರೆ, ಏನಾಗಿದೆ ಎಂದು ಹೇಳುತ್ತಾರೆಯೇ?

ಶ್ರೀ ಬಿ. ಎಲ್. ಗೌಡ.—ಈಗಾಗಲೇ ಈ ಸಂಬಂಧವಾಗಿ ಪೋಲೀಸ್ ಸರ್ಕಲ್ ಇನ್‌ಸ್ಪೆಕ್ಟರಿಗೆ ದೂರು ಕೊಟ್ಟಿದೆ, ಆಡಿಟ್ ಮಾಡಿಸುತ್ತಿದ್ದೇವೆ, ಕೋ-ಅಪರೇಟಿವ್ ಸಂಘಗಳ ಕಾನೂನಿನ 64ನೇ ಸೆಕ್ಷನ್ ಪ್ರಕಾರ ಎನ್‌ಕ್ವೈರಿ ನಡೆಯುತ್ತಿದೆ.

ಶ್ರೀ ಬಿ. ಭಾನ್ಕರ ಶೆಟ್ಟಿ.—ಆಪಾದಿತರು ದಕ್ಷಿಣ ಕನ್ನಡ ಜಿಲ್ಲೆಯ ಕಾಂಗ್ರೆಸ್ ಕಮಿಟಿಯ ಸದಸ್ಯರಲ್ಲವೇ, ಸ್ವಾಮಿ?

ಶ್ರೀ ಬಿ. ಎಲ್. ಗೌಡ.—ಆ ವಿಷಯ ನನಗೆ ಗೊತ್ತಿಲ್ಲ.

Sri H. N. NANJE GOWDA.—It is said here that the audit of the accounts for 1967-68 is completed, but not the enquiry. What is the stage of the enquiry? When did the enquiry commence?

Sri B. L. GOWDA.—The enquiry commenced during October-November 1968.

Sri N. G. HALAPPA.—May I know whether they have apprehended the accused and at what stage is the police investigation?

ಶ್ರೀ ಬಿ. ಎಲ್. ಗೌಡ.—ಕಂಪ್ಲೈಂಟ್ ಕೊಟ್ಟಿರುವುದು 17-9-68 ರಲ್ಲಿ. It is under investigation.

ಶ್ರೀ ಎಂ. ನಾಗಪ್ಪ.—ಇದು ಬಹಳ ನಿಧಾನವಾಗಿರುವುದರಿಂದ ಮತ್ತೊಂದು ಛಾರ್ಜ್‌ಷೀಟ್ ಹಾಕುತ್ತೀರಾ?

ಶ್ರೀ ಬಿ. ಎಲ್. ಗೌಡ.—ನಿಧಾನವಾಗಲು ಕಾರಣವಿದೆ. ಎನ್‌ಕ್ವೈರಿ ಮಾಡಿ ಪೋಲೀಸ್ ಇಲಾಖೆಗೆ ಕೊಟ್ಟಿಲ್ಲದೆ ನಿಧಾನವಾಗಿದೆ.

ಶ್ರೀ ಬಿ. ಎಂ. ಇದಿನಬ್ಬ.—ದುರುಪಯೋಗವಾಗಿರುವುದನ್ನು ಸಂಪೂರ್ಣವಾಗಿ ವಾಪಸ್ಸು ಪಡೆಯಲು ಅವಕಾಶವಿದೆಯೇ?

ಶ್ರೀ ಬಿ. ಎಲ್. ಗೌಡ.—ಹಣ ವಾಪಸು ಪಡೆಯಲು ತೊಂದರೆಯೇನೂ ಇಲ್ಲ, ವಾಪಸ್ಸು ಪಡೆಯಲು ಅವಕಾಶವಿದೆ ಎಂದು ತಿಳಿದುಬಂದಿದೆ. ದುರುಪಯೋಗ ಮಾಡಿರುವವರು ಧಡೂತಿ ಆಸಾಮಿ.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ಧಡೂತಿ ಆಸಾಮಿಯಾದರೆ ದುರುಪಯೋಗ ಮಾಡಬಹುದೆಂದು ಆದೇಶ ಕೊಡಲಾಗಿದೆಯೇ?

ಶ್ರೀ ಬಿ. ಎಲ್. ಗೌಡ.—ಹಾಗೇನೂ ಇಲ್ಲ. ಅವರಿಗೆ ಸುಮಾರು 90 ಸಾವಿರ ರೂಪಾಯಿಗಳ ಷ್ಯೂರಿಟಿ ಇದೆ. ಆದ್ದರಿಂದ ಹಾಗೆ ಹೇಳಿದೆ.

Land owned by Harijan Families in Kendahalli village

584. Sri C. R. RANGE GOWDA (Magadi).—

Will the Minister for Revenne be pleased to state :—

(*a*) the number of Harijan families in Kendahalli village, in Kasaba Hobli, Magadi taluk ;

(SRI C. R. RANGE GOWDA)

(*b*) the extent of land owned by each one of these families;

(*c*) the action taken to confirm the grant of land under occupation to these families ?

SRI H. V. KOUJALGI (Minister for Revenue).—

(*a*) 34.

(*b*) *Vide* Statement appended.

(*c*) The land occupied is Forest land which is not yet released. The grant of land in unauthorised occupation to the encroacher can only be made if specific provision therefor is made in the Mysore Land Revenue Act, 1964.

STATEMENT

List of names of Harijan Families of Kendahalli village, Magadi taluk.

Sl. No.	Name		Extent of land owned	Remarks
1	2		3	4
	Sriyuths—		Acres Gts.	
1	Bora *alias* Bajja	...	5–08	
2	Bora s/o Sanna	...	0–26½	
3	Hutchahanumamma	...	...	Landless
4	Basavaiah s/o Jogaiah	...	...	Landless
5	Chikkabora s/o Doddabora	...	1–00	
6	Boraiah s/o Chikkahudugaiah	...	1–00	
7	Andanaiah s/o Chikkahudugaiah	...	0–20	
8	Ningaiah s/o Chikkahudugaiah	...	0–20	
9	Mallaiah s/o Lingaiah	...	...	Landless
10	Chikkalinga s/o Linga	...	...	Landless
11	Motaiah, Chikkaiah, s/o Linga	...	4–32	
12	Narasa s/o Sepoy Lakka	..	...	Landless
13	Ningaiah s/o Jogaiah	...	1–20	
14	Siddaiah s/o Jogaiah	...	1–20	
15	Jogaiah s/o Dodda Bora	...	1–00	
16	Kaleeramma wife of Thirumaladasi	...	6–31	
17	Karithimmaiah s/o Kariya	...	3–16	

1	2		3	4
	Sriyuths—		Acres Gts.	
18	Kempaiah s/o Ariyaiah	...	...	Landless
19	Ulamma	...	...	Landless
20	Chikkaiah s/o Govindaiah	...	0–27	
21	Rangaiah s/o Govindaiah	...	0–27	
22	Venkata s/o Dasi	...	0–27	
23	Channa s/o Kadumalla	...	1–06	
24	Revaiah s/o Kadumalla	...	3–35	
25	Narasa s/o Puttanarasa	...	2–00	
26	Kariya *alias* Papaiah	...	1–15	
27	Jogi Maraiah	...	1–33	
28	Lakshminarasimha s/o Kempalakka	...	...	Landless
29	Narasimha s/o Kempalakka	...	...	Landless
30	Puttarasa s/o Kadumalla	...	1–05	
31	Siddaiah	...	...	Landless
32	Channa s/o Kadumalla	...	1–20	
33	Venkatanarasa	...	...	Landless
34	Marichanna s/o Kadumalla	...	1–20	

ಶ್ರೀ ಸಿ. ಆರ್. ರಂಗೇಗೌಡ.—ಈ 34 ಹರಿಜನ ಕುಟುಂಬಗಳವರು ಎಷ್ಟು ವರ್ಷದಿಂದ ಸಾಗುವಳಿ ಮಾಡುತ್ತಿದ್ದಾರೆ.

† ಶ್ರೀ ಎಚ್. ವಿ. ಕೌಜಲಗಿ.—10 ವರ್ಷಗಳಿಂದ.

ಶ್ರೀ ಸಿ. ಆರ್. ರಂಗೇಗೌಡ.—ಇದು ಫಾರೆಸ್ಟ್ ಲ್ಯಾಂಡ್. ರೆವೆನ್ಯೂ ಇಲಾಖೆಯವರು ಪ್ರತಿ ವರ್ಷ ಟಿ.ಟಿ. ಹಾಕಿ ದಂಡ ವಸೂಲುಮಾಡುತ್ತಿದ್ದಾರೆ. ಇದು ಯಾವ ಇಲಾಖೆಗೆ ಸೇರಿದೆ ಎಂಬ ವಿಚಾರದಲ್ಲಿ ಜಿಜ್ಞಾಸೆ ಬಂದು ರೆವೆನ್ಯೂ ಮತ್ತು ಫಾರೆಸ್ಟ್ ಇಲಾಖೆಯವರು ಸಾಗುವಳಿದಾರರಿಗೆ ತೊಂದರೆ ಮಾಡುತ್ತಿದ್ದಾರೆ. ಹಿಂದೆ ಸ್ಪೇ ಆರ್ಡರು ಕೊಟ್ಟಿದ್ದರು. ತಾವೂ ಕೂಡ ಸ್ಪೇ ಆರ್ಡರನ್ನು ಕೊಟ್ಟು ಲ್ಯಾಂಡ್ ರೆವೆನ್ಯೂ ಆಕ್ಟನ್ನು ತಿದ್ದುಪಡಿ ಮಾಡುವವರೆಗೆ ಸಾಗುವಳಿ ಮಾಡುತ್ತಿರುವವರನ್ನು ಜಮೀನಿನಿಂದ ಹೊರಗೆ ಹಾಕದಹಾಗೆ ಮಾಡುತ್ತೀರಾ ?

ಶ್ರೀ ಎಚ್. ವಿ. ಕೌಜಲಗಿ.—ಫಾರೆಸ್ಟ್ ಇಲಾಖೆ ಈ ಜಮೀನನ್ನೂ ರಿಲೀಸ್ ಮಾಡಲು ವ್ಯವಹಾರ ನಡೆಯುತ್ತಿದೆ. 1965 ನೆಯ ಇಸವಿಗೆ ಮುಂಚೆ ಸಾಗುಮಾಡುತ್ತಿದ್ದವರನ್ನು ಬಿಡಿಸಿ ಬಾರದು ಎಂದು ಸೂಚನೆ ಕೊಡಲಾಗಿದೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—34 ಸಂಸಾರಗಳವರು 15 ವರ್ಷಗಳಿಂದ ಈ ಜಮೀನನ್ನು ಆಬಾದುಮಾಡಲು ಖರ್ಚುಮಾಡಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

Sri H. V. KOUJALGI.—I have stated that they are in wrongful possession for the last ten years. I cannot say what amount they have spent for the improvement of the land.

ಶ್ರೀ ಸಿ. ಆರ್. ರಂಗೇಗೌಡ.—ಈ ತಾಲ್ಲೂಕಿನಲ್ಲಿ ಒಂದು ಸಲಹಾ ಸಮಿತಿ ಇದೆ. ರೆವೆನ್ಯೂ ಇಲಾಖೆಗೆ ಫಾರೆಸ್ಟ್ ಜಮೀನನ್ನು ತೆಗೆದುಕೊಳ್ಳುವ ವಿಚಾರ ಆ ಸಮಿತಿ ವಿಚಾರಮಾಡುವುದು. ಏನು ಕಾರಣದಿಂದಲೋ ಈ ಜಮೀನಿನ ವಿಚಾರ ಅದು ಕೈಬಿಟ್ಟಿದೆ. ಈಗಲಾದರೂ ಈ ಫಾರೆಸ್ಟ್ ಜಮೀನನ್ನು ರಿಲೀಜ್‌ಮಾಡಿ ಹರಿಜನರಿಗೆ ಕೊಡಲು ಜಾಗ್ರತೆ ಪ್ರಯತ್ನಮಾಡುತ್ತೀರಾ ?

Sri H. V. KOUJALGI.—I have already stated that correspondence is going on between the Forest Department and the Revenue Depertment for the immediate release of this land.